# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ನೂತನ ಪಿಂಚಣಿ ಯೋಜನೆಗೆ ಒಳಪಡದ ನೌಕರರ ವಂತಿಗೆಯನ್ನು Error Rectification Module (ERM) ಮೂಲಕ ಹಿಂಪಡೆಯುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಪತ್ರ ಸಂಖ್ಯೆ: ಆಇ (ವಿ) 170 ಪಿಇಎನ್ 2014, ದಿನಾಂಕ: 17.12.2016.
2. ಖಜಾನೆ ನಿರ್ದೇಶನಾಲಯದ ಪತ್ರ ಸಂಖ್ಯೆ: ಖನಿ/ಎನ್.ಪಿ.ಎಸ್./05/2014-15, ದಿನಾಂಕ: 28.12.2017.
3. ಮಹಾಲೇಖಪಾಲರ ಪತ್ರ ಸಂಖ್ಯೆ: AG (A&E) deposit I/2018-19/12, ದಿನಾಂಕ: 29.06.2018.
4. ಖಜಾನೆ ಆಯುಕ್ತರ ಪತ್ರ ಸಂಖ್ಯೆ: DoT/NPS0/ADM(GLC)/6/2020, ದಿನಾಂಕ: 07.12.2020.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಪತ್ರ ದಿನಾಂಕ: 17.12.2016ರಲ್ಲಿ ನೂತನ ಪಿಂಚಣಿ ಯೋಜನೆಗೆ ಒಳಪಡದ ನೌಕರರ ವೇತನದಿಂದ ಕಟಾವಣೆಯಾಗಿ ಪ್ರಾನ್ ಖಾತೆಗೆ ಜಮೆಯಾಗಿರುವ ಮೊತ್ತವನ್ನು ನೌಕರರಿಗೆ ಹಿಂತಿರುಗಿಸಬೇಕಿರುತ್ತದೆ. ಸಿ.ಆರ್.ಎ ರವರಿಂದ Error Rectification Module ಪ್ರಕ್ರಿಯೆ ಮೂಲಕ ಮೊತ್ತವನ್ನು ಹಿಂಪಡೆದು ಖಜಾನೆ ನಿರ್ದೇಶಕರ ಪದನಾಮದಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆಯಾದ ಮೊತ್ತವನ್ನು ಲೆಕ್ಕ ಶೀರ್ಷಿಕೆ 8342-00-117-051 ಗೆ ಜಮೆ ಮಾಡಲು ಅನುಮತಿಸಲಾಗಿತ್ತು. ಎನ್.ಪಿ.ಎಸ್ ನೌಕರರ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಸಂಬಂಧಪಟ್ಟ ಖಜಾನೆಯಿಂದ ನೌಕರನ ವಂತಿಗೆ ಮತ್ತು ಅದರ ಮೇಲಿನ ಗಳಿಕೆಯನ್ನು ಡ್ರಾ ಮಾಡಲು ಹಾಗೂ ಸರ್ಕಾರದ ವಂತಿಗೆ ಮತ್ತು ಅದರ ಮೇಲಿನ ಗಳಿಕೆಯನ್ನು ಸಂಬಂಧಪಟ್ಟ ಖಜಾನಾಧಿಕಾರಿಗಳು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ತಿಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ದಿನಾಂಕ: 29.06.2018ರಲ್ಲಿ ತಿಳಿಸಿದಂತೆ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಒಟ್ಟು ಮೊತ್ತವನ್ನು ಲೆಕ್ಕ ಶೀರ್ಷಿಕೆ 8342-00-117-0-51 ಗೆ ಜಮೆ ಮಾಡುವ ಸಂಬಂಧ "51 – Receipts awaiting transfer" ಲೆಕ್ಕ ಶೀರ್ಷಿಕೆಯ ಸ್ವರೂಪ Suspense Account ಆಗಿರುವ ಕಾರಣ ಸದರಿ ಲೆಕ್ಕ ಶೀರ್ಷಿಕೆಯಿಂದ ವ್ಯವಹರಿಸುವುದು ಸೂಕ್ತವಲ್ಲವೆಂದು ಮಹಾಲೇಖಪಾಲರು ಅಭಿಪ್ರಾಯಿಸಿ ಪ್ರತ್ಯೇಕ ಲೆಕ್ಕ ಶೀರ್ಷಿಕೆ 8342-00-117-0-04 ಯನ್ನು ನೀಡಿರುತ್ತಾರೆ. ಸರ್ಕಾರದ ವಂತಿಗೆಯನ್ನು 2071 (ROP) ಹಾಗೂ ಅದರ ಮೇಲಿನ ಬಡ್ಡಿಯನ್ನು (0075) ಗೆ ಜಮೆ ಮಾಡಲು ಮೇಲೆ

ಓದಲಾದ (1) ರ ದಿನಾಂಕ: 17.12.2016 ರಲ್ಲಿ ತಿಳಿಸಿದ್ದು, ಮಹಾಲೇಖಪಾಲರು 0075 ಲೆಕ್ಕ ಶೀರ್ಷಿಕೆಗೆ ಬಡ್ಡಿ ಜಮೆ ಮಾಡುವುದು ಸೂಕ್ತವಾಗಿರುವುದಿಲ್ಲವೆಂದು ತಿಳಿಸಿ, ಲೆಕ್ಕ ಶೀರ್ಷಿಕೆ 0049-04-800-0-04 ಗೆ ಜಮೆ ಮಾಡಲು ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರ ಪತ್ರದಲ್ಲಿ ಪ್ರಸ್ತುತ ಖಜಾನೆ-2 ರಲ್ಲಿ ಪಾವತಿ ನಡೆಯುತ್ತಿರುವುದರಿಂದ ನೇರವಾಗಿ ಪಾವತಿಗಳು ಇ-ಪಾವತಿಯಾಗುವುದರಿಂದ ERM ಪ್ರಕ್ರಿಯೆಗೆ ಪರಿಷ್ಕೃತ ಆದೇಶ ಹೊರಡಿಸಬೇಕೆಂದು ಖಜಾನೆ ಆಯುಕ್ತರು ಕೋರಿರುತ್ತಾರೆ. ಆದ್ದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಆಇ 07 ಪಿಇಎನ್ 2021, ಬೆಂಗಳೂರು,**
**ದಿನಾಂಕ: 16.03.2021**

ನೂತನ ಪಿಂಚಣಿ ಯೋಜನೆಗೆ ಒಳಪಡದ ನೌಕರರ ವಂತಿಗೆಯನ್ನು Error Rectification Module ಮೂಲಕ ಹಿಂಪಡೆಯುವ ಸಂಬಂಧ ಪ್ರಸ್ತುತ ಖಜಾನೆ-1 ರಿಂದ ಖಜಾನೆ-2 ಕ್ಕೆ ಠೇವಣಿ ಖಾತೆ ವರ್ಗಾವಣೆಯಾಗಿದ್ದು, ಸಿ.ಆರ್.ಎ ರವರಿಂದ ಖಜಾನೆ ಆಯುಕ್ತರ ಪದನಾಮದಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ Non NPS ನೌಕರರ ಪ್ರಾನ್ ಖಾತೆಗೆ ಜಮೆಯಾಗಿರುವ ಮೊತ್ತವು ERM ಪ್ರಕ್ರಿಯೆಯಲ್ಲಿ ಇ-ಪಾವತಿ(e-payment) ಮೂಲಕ ಜಮೆಯಾಗುವುದು; ಈ ಮೊತ್ತವನ್ನು ಖಜಾನೆ-2 ನಲ್ಲಿ ಲೆಕ್ಕ ಶೀರ್ಷಿಕೆ 8342-00-117-0-18-701 ಕ್ಕೆ ಎನ್.ಪಿ.ಎಸ್ ಘಟಕದಿಂದ ಚಲನ್ ಮೂಲಕ (ಠೇವಣಿ ಖಾತೆ ಸಂಖ್ಯೆ: 27572A190) ಜಮೆ ಮಾಡಲಾಗುವುದು. ಉಳಿದಂತೆ ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಜಮೆ/ಹೊಂದಾಣಿಕೆ ಮಾಡಲಾಗುವುದು ಹಾಗೂ ನಗರ ಜಿಲ್ಲಾ ಖಜಾನೆಯಿಂದ ನೌಕರರ ವಂತಿಗೆಯನ್ನು ನೌಕರರ ಬ್ಯಾಂಕ್ ಖಾತೆಗೆ Recipient ID ಮೂಲಕ ಇ-ಪಾವತಿ ಮಾಡತಕ್ಕದ್ದು.

| ಕ್ರ.ಸಂ | ಖರ್ಚು ಲೆಕ್ಕ ಶೀರ್ಷಿಕೆ | ಜಮೆ ಲೆಕ್ಕ ಶೀರ್ಷಿಕೆ | ಷರಾ |
|---|---|---|---|
| 1 | 8342-00-117-0-18-701 | 2071-01-911-0-02 (RoP) | ಸರ್ಕಾರದ ವಂತಿಗೆ |
| 2 | 8342-00-117-0-18-701 | 0049-04-800-0-01 (Receipt head) | ಸರ್ಕಾರದ ವಂತಿಗೆ ಮೇಲಿನ ಆದಾಯ |

ಎನ್.ಪಿ.ಎಸ್. ಗೆ ಒಳಪಡದ (Non NPS) ನೌಕರರ ERM ಪ್ರಕ್ರಿಯೆ ಕೈಗೊಳ್ಳಲು ಈ ಕೆಳಕಂಡ ದಾಖಲೆಗಳನ್ನು ಡಿ.ಡಿ.ಓ.ರವರು ಯುಕ್ತ ದ್ವಾರದಲ್ಲಿ ಸಂಬಂಧಪಟ್ಟ ಖಜಾನೆಗೆ ಸಲ್ಲಿಸಲು ಕೆಳಕಂಡಂತೆ ಕ್ರಮ ವಹಿಸತಕ್ಕದ್ದು:-

1. ನೌಕರರು ಎನ್.ಪಿ.ಎಸ್ ಯೋಜನೆಗೆ ಒಳಪಡುವುದಿಲ್ಲವೆಂದು Annexure -1 ನಮೂನೆಯಲ್ಲಿ ನೇಮಕಾತಿ ಪ್ರಾಧಿಕಾರದಿಂದ ದೃಢೀಕರಣವನ್ನು ಸಲ್ಲಿಸುವುದು.

2. ಪ್ರಾನ್ ಖಾತೆಗೆ ಸಂಬಂಧಿಸಿದ SOT ಅಥವಾ ವೇತನದಿಂದ ಕಡಿತಗೊಳಿಸಿದ ಎನ್.ಪಿ.ಎಸ್ ಮೊತ್ತದ ವಿವರಗಳ ತಃಖ್ತೆ.

   (ಅ) SOT ದಾಖಲೆಯಲ್ಲಿ ನಮೂದಿಸಿರುವುದಲ್ಲದೇ ಇನ್ಯಾವುದೇ ಮೊತ್ತ ಎನ್.ಪಿ.ಎಸ್. ಸಂಬಂಧ ಕಟಾವಣೆ ಆಗಿರುವುದಿಲ್ಲ" ಎಂದು ನೌಕರರಿಂದ ದೃಢೀಕರಣ ಪತ್ರ.

   (ಆ) ಪ್ರಾನ್ ಖಾತೆಯ SOT ಅಲ್ಲದೇ, ವೇತನದಿಂದ ಕಡಿತಗೊಂಡ ಎನ್.ಪಿ.ಎಸ್ ಮೊತ್ತದ ವಿವರಗಳ ತಃಖ್ತೆ.

3. ಖಜಾನೆಯವರು ಡಿಡಿಓರವರಿಂದ ಸ್ವೀಕೃತಗೊಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರಿಯಿದ್ದಲ್ಲಿ CRA-NSDL ರವರಲ್ಲಿ Claim ID ಯನ್ನು initiate and verify ಮಾಡಿ ಪ್ರಸ್ತಾವನೆಯನ್ನು ಎನ್.ಪಿ.ಎಸ್ ಘಟಕಕ್ಕೆ authorise ಮಾಡಲು ಸಲ್ಲಿಸುವುದು.

4. ಖಜಾನೆಯಿಂದ ಸ್ವೀಕೃತಗೊಂಡ ಪ್ರಸ್ತಾವನೆಯನ್ನು ಎನ್.ಪಿ.ಎಸ್ ಘಟಕದಲ್ಲಿ ಪರಿಶೀಲಿಸಿ, ಸರಿಯಿದ್ದಲ್ಲಿ CRA-NSDL ರವರಲ್ಲಿ Claim ID ಅನ್ನು authorise ಮಾಡಿ ERM ಪ್ರಕ್ರಿಯೆ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕುಮಟಾ ಪ್ರಕಾಶ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).

ಇವರಿಗೆ:-

1. ಮಹಾಲೇಖಪಾಲರು (ಎ ಮತ್ತು ಇ) / ಪ್ರಧಾನ ಮಹಾಲೇಖಪಾಲರು / ಲೆಕ್ಕಪರಿಶೋಧಕರು – ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
5. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.

8. ಎಲ್ಲಾ ಜಿಲ್ಲಾ ಪಂಚಾಯತ್ ರಾಜ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.
9. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
11. ಜಂಟಿ ನಿರ್ದೇಶಕರು, ನೂತನ ಪಿಂಚಣಿ ಯೋಜನೆ ಘಟಕ, 5 ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು..
12. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ದೇವರಾಜ್ ಅರಸ್ ರಸ್ತೆ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ನಮೂನೆ-1

**ವಿಷಯ:** ಎನ್.ಪಿ.ಎಸ್. ಗೆ ಒಳಪಡದ ನೌಕರರ ಸೇವೆಗೆ ಸೇರಿದ ದಿನಾಂಕವನ್ನು ಸೇವಾವಹಿ ಹಾಗೂ ಹೆಚ್.ಆರ್.ಎಂ.ಎಸ್.ನಲ್ಲಿ ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

:-:-:

ಈ ಕೆಳಗೆ ನಮೂದಿಸಿರುವ ನೌಕರರು ಸೇವೆಗೆ ಸೇರಿದ ದಿನಾಂಕವನ್ನು ಸೇವಾವಹಿಯಲ್ಲಿರುವಂತೆ HRMS ನಲ್ಲಿ ನಮೂದಿಸಲಾಗಿದೆ ಎಂದು ಪರಿಶೀಲಿಸಿದೆ ಹಾಗೂ ಸದರಿ ನೌಕರರು ಎನ್.ಪಿ.ಎಸ್. ಗೆ ಒಳಪಡುವುದಿಲ್ಲವೆಂದು ದೃಢೀಕರಿಸಿದೆ.

| ಡಿಡಿಓ ಕೋಡ್ | ಡಿಡಿಓ ಕಛೇರಿಯ ಹೆಸರು | ನೌಕರರ ಹೆಸರು | ಪ್ರಾನ್ ಸಂಖ್ಯೆ | ಸೇವೆಗೆ ಸೇರಿದ ದಿನಾಂಕ |
|---|---|---|---|---|
| | | | | |
| | | | | |

ಇಲಾಖಾ ಮುಖ್ಯಸ್ಥರು / ನೇಮಕಾತಿ ಪ್ರಾಧಿಕಾರಿಗಳ ಸಹಿ
ಹಾಗೂ ಮೊಹರು.